ಗಮನ ಸೆಳೆಯುವ ಸೂಚನೆಗಳು

ಕರ್ನಾಟಕ ಅರ್ಬನ್ ಫೆಡರೇಷನ್‌ನ ಕಾರ್ಮಿಕರು ಹಾಗೂ ನೌಕರ ವರ್ಗದವರಿಂದ ಸರ್ಕಾರಕ್ಕೆ ಮುಷ್ಕರದ ನೋಟೀಸ್

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಮಿಲ್ಕ್ ಫೆಡರೇಶನ್ ಕಾರ್ಮಿಕರು ಹಾಗೂ ನೌಕರ ವರ್ಗದವರು, ಸರ್ಕಾರಕ್ಕೆ ಮುಷ್ಕರದ ನೋಟೀಸ್ ಕೊಟ್ಟಿರುವ ಬಗ್ಗೆ ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ,—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳ ಗಮನ ಸೆಳೆಯುವ ಸೂಚನೆಗೆ ಲಿಖಿತ ಹೇಳಿಕೆ ತಯಾರಾಗುತ್ತಾ ಇದೆ. ಇಲ್ಲಿ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಏನೆಂದರೆ, ಅವರು ಪ್ರಶ್ನೆ ಕೇಳಿದ ಪ್ರಕಾರ ಸರಕಾರಕ್ಕೆ ಇದುವರೆಗೆ ಈ ಬಗ್ಗೆ ಯಾವುದೇ ನೋಟೀಸ್ ಬಂದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಸಚಿವರಿಂದ ಉತ್ತರ ಇಷ್ಟೆಯೆ ?

ಅಧ್ಯಕ್ಷರು —ತಾವು ಗಮನ ಸೆಳೆಯುವ ಸೂಚನೆಯಲ್ಲಿ ಏನು ವಿಚಾರ ಹೇಳಿದ್ದೀರಿ ಅದಕ್ಕೆ ಸಂಬಂಧಪಟ್ಟಂತೆ ನೋಟೀಸ್ ಸರ್ಕಾರಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ—ಇವರಿಗೆ ಬಂದಿಲ್ಲವಾದರೂ ಮಿಲ್ಕ್ ಫೆಡರೇಶನ್‌ನವರಿಗೆ ಬಂದಿಲ್ಲವೇ ?

MR SPEAKER.—He is answering on behalf of the Federation.

ಶ್ರೀ ಬಿ. ಬಸವಲಿಂಗಪ್ಪ.—ತಾವು ಪ್ರಶ್ನೆ ಕೇಳಿರುವುದು ಏನೆಂದರೆ

"To call the attention of the Minister for Forest, Animal Husbandry regarding the strike notice given to the Government."

ಎಂದು, ಇವಕ್ಕೆ ಉತ್ತರವಾಗಿ ನಾನು ಹೇಳಿದ್ದು ಏನೆಂದರೆ, ಅಂಥ ಸ್ಟ್ರೈಕ್ ನೋಟೀಸ್ ನಮಗೆ ಬಂದಿಲ್ಲ ಎಂದು.

ಶ್ರೀ ಡಿ. ಬಿ. ಚಂದ್ರೇಗೌಡ.—ಲಿಖಿತ ಉತ್ತರವು ಈ ಬಗ್ಗೆ ತಯಾರಾಗುತ್ತಾ ಇದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಹಾಗಾದರೆ ಅದು ತಯಾರಾದ ಮೇಲೆ ಚರ್ಚೆ ಮಾಡೋಣ, ದಯವಿಟ್ಟು ಅದಕ್ಕೆ ಅನುಮತಿ ಕೊಡಿ.

ಅಧ್ಯಕ್ಷರು.—ಆಗಬಹುದು. ಮುಂದಿನ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ ಶ್ರೀ ವಾಟಾಳ್ ನಾಗರಾಜ್ ಮತ್ತು ಶ್ರೀ ಎಂ. ಮಹದೇವ್‌ರವರುಗಳು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಅರ್ಬನ್ ಡೆವಲಪ್‌ಮೆಂಟ್ ಮತ್ತು ಇತರೇ ಖಿ-ಳಿ ಡಿಪಾರ್ಟ್‌ಮೆಂಟ್‌ಗಳು ಇದರಲ್ಲಿ ಸೇರಿವೆ. I will find appropriate time. ಮುಂದಿನ ವಾರದಲ್ಲಿ ಇದನ್ನು ಹಾಕಿಸಿಕೊಳ್ಳೋಣ.

ನಿಯಮ ೫೩ಳಿರ ಮೇರೆಗೆ

ಶ್ರೀ ಕೆ. ಹೆಚ್. ಹನುಮೇಗೌಡ (ಗೈರು ಹಾಜರು).—

೧. ಬೆಂಗಳೂರಿನಲ್ಲಿ ಮಕ್ಕಳಿಗೆ ಮನೋರಂಜನೆಯನ್ನು ಒದಗಿಸಲು ದೆಹಲಿ ಮತ್ತು ಬೊಂಬಾಯಿಯಲ್ಲಿ ಇರುವ ರೀತಿ ಅಮ್ಯೂಸ್‌ಮೆಂಟ್ ಪಾರ್ಕ್ ಸ್ಥಾಪಿಸಲು ಒತ್ತಾಯ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ದೆಹಲಿಯಲ್ಲಿ ಮಕ್ಕಳಿಗಾಗಿ ಮನರಂಜನೆಯನ್ನು ಒದಗಿಸಲು ಅಪ್ಪುಗರ್ ಇದೆ. ಇದೇ ರೀತಿ ಬೊಂಬಾಯಿಯಲ್ಲಿ ಎಸ್ಸೆಲ್‌ವರ್ಲ್ಡ್ ಎಂಬ ಆಧುನಿಕ ಅಮ್ಯೂಸ್‌ಮೆಂಟ್ ಪಾರ್ಕ್ ಇದೆ. ಆದರೆ ಬೆಂಗಳೂರು ಮಹಾನಗರದಲ್ಲಿ ಮಕ್ಕಳಿಗಾಗಿ ಯಾವುದೇ ರೀತಿಯ ಅಮ್ಯೂಸ್‌ಮೆಂಟ್‌ಪಾರ್ಕ್ ಇರುವುದಿಲ್ಲ. ಆದ್ದರಿಂದ ಸರ್ಕಾರದವರು ಎಸ್ಸೆಲ್‌ವರ್ಲ್ಡ್ ಮಾದರಿಯ ಒಂದು ರಿಕ್ರಿಯೇಷನ್ ಪಾರ್ಕ್‌ನ್ನು ಸರ್ಕಾರದ ವತಿಯಿಂದಾಗಲೀ ಅಥವಾ ಖಾಸಗಿ